ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೨೨ನೇ ಜನವರಿ ೧೯೯೦, ಮಾಘ ೨, ೧೯೧೧ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ರವರು ಪೀಠವನ್ನು ಅಲಂಕರಿಸಿದರು].

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆ ಮತ್ತು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಚಾಮರಾಜನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಭೀಕರವಾಗಿದೆ. ಜನ ಅಲ್ಲಿ ಸಾಯುವ ಸ್ಥಿತಿಯಲ್ಲಿದ್ದಾರೆ. ಈ ವಿಷಯವನ್ನು ಅನೇಕ ಬಾರಿ ಮುಖ್ಯಮಂತ್ರಿಗಳ ಗಮನಕ್ಕೆ ತಂದಿರುತ್ತೇನೆ. ಆದರೂ ಕೂಡ ಸರ್ಕಾರದವರು ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಗಮನಹರಿಸುತ್ತಿಲ್ಲ. ....

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್.—ರೈತರ ಸಾಲವನ್ನು ಸ್ಥಗಿತ ಮಾಡಂತ್ತೇವೆಂದು ಹೇಳಿದ್ದರಿ ಆದರೆ ಮತ್ತೆ ವಸೂಲಿಗೆ ಆದೇಶ ಮಾಡಿದ್ದಾರೆ. ಇದು ಅತ್ಯಂತ ಗಂಭೀರವಾದ ಸಮಸ್ಯೆ. ತಾವು ಈ ವಿಷಯವನ್ನು ಮೊದಲು ಚರ್ಚೆಗೆ ತೆಗೆದುಕೊಳ್ಳಬೇಕು.....

ಅಧ್ಯಕ್ಷರು.—ಸನ್ಮಾನ್ಯ ಸದಸ್ಯರೇ, ತಮಗೆಲ್ಲರಿಗೂ ನಾನು ಮೊದಲು ನೂತನ ವರ್ಷದ ಶುಭಾಶಯಗಳನ್ನು ಸಲ್ಲಿಸುವುದಕ್ಕೆ ಇಚ್ಛಿಸುತ್ತೇನೆ. ನೂತನ ವರ್ಷ ತಮಗೆ, ನಮ್ಮ ರಾಜ್ಯಕ್ಕೆ, ನಮ್ಮ ದೇಶಕ್ಕೆ ಒಳಿತನ್ನು ತರಲಿ ಎಂದು ಹಾರೈಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ಚಾಮರಾಜನಗರ ಕುಡಿಯುವ ನೀರಿನ ಸಮಸ್ಯೆ ಭೀಕರವಾಗಿದೆ. ಅಲ್ಲಿನ ಜನ ಕುಡಿಯುವುದಕ್ಕೆ ನೀರಿಲ್ಲದೆ ಸಾಯುತ್ತಿದ್ದಾರೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ಅನೇಕ ಬಾರಿ ತಂದಿರುತ್ತೇನೆ. ಈ ಹೊಸ ವರ್ಷದಲ್ಲಿ ಇಂತಹ ವಿಷಯವನ್ನು ಇಲ್ಲಿ ಹೇಳುವುದಕ್ಕೆ ನನಗೆ ಬಹಳ ನೋವಾಗುತ್ತಿದೆ.....

ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

ಅಧ್ಯಕ್ಷರು.—ಈಗ ನಮ್ಮ ಇಂದಿನ ಕಾರ್ಯಕ್ರಮದ ಪಟ್ಟಿಯ ಪ್ರಕಾರ, ನಾಮನಿರ್ದೇಶನ ಹೊಂದಿದ ಹೊಸ ಸದಸ್ಯರ ಪ್ರಮಾಣ ವಚನ ಸ್ವೀಕಾರ.

Mr. Derrick F. Fullinofaw took Oath in English in the name of God

ಶ್ರೀ ವಾಟಾಳ್ ನಾಗರಾಜ್.—ಈಗಾಗಲೇ ತಮಗೆ ಗಮನ ಸೆಳೆಯುವ ಸೂಚನೆ ಕಳುಹಿಸಿದ್ದೇನೆ. ಚಾಮರಾಜನಗರಕ್ಕೆ ಕುಡಿಯುವ ನೀರಿಗಾಗಿ ಕಾವೇರಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲಿಲ್ಲ. ಮತ್ತೆ ಗಡಿ ಸಮಸ್ಯೆಯನ್ನೂ ಕೆಡಿಗಣಿಸಿದ್ದೀರಿ. ಬರಗಾಲದಲ್ಲಿರತಕ್ಕ ಅಲ್ಲಿಯ ಜನ ಮುಖ್ಯಮಂತ್ರಿಗಳಿಗೆ ಈ ಖಾಲಿ ಕೊಡವನ್ನು ಸಲ್ಲಿಸಲು ಕಳುಹಿಸಿದ್ದಾರೆ. ಅಲ್ಲಿನ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಭೀಕರವಾಗಿ ಜನ ಸಾಯುತ್ತಿದ್ದಾರೆ. ಅಲ್ಲಿ ರಸ್ತೆ ಇಲ್ಲ, ನಲ್ಲಿ ಇಲ್ಲ, ಕುಡಿಯುವ ನೀರಿಲ್ಲ, ಆ